# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

**ಸ್ವಾಮಿ ಭಜನಾನಂದ**

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಕಳೆದ** ಶತಮಾನದ ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಎದುರಿಸಬೇಕಾಗಿದ್ದ ಅತಿ ಮುಖ್ಯ ಸಮಸ್ಯೆಯೆಂದರೆ ಅದ್ವೈತ ತತ್ತ್ವವನ್ನು ಪೂರ್ಣವೂ, ವ್ಯಾಪಕವೂ, ಕ್ರಿಯಾತ್ಮಕವೂ, ಪ್ರಾಯೋಗಿಕವೂ ಆದ ತತ್ತ್ವವನ್ನಾಗಿ ಪರಿವರ್ತಿಸಿ ಜನಗಳ ದಿನನಿತ್ಯದ ಸಮಸ್ಯೆಗಳನ್ನೇ ಅಲ್ಲದೆ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನೂ ಬಗೆಹರಿಸುವ ಸಾಧನವನ್ನಾಗಿ ಮಾಡುವುದು. ಮೊದಲನೆಯದಾಗಿ ಅವರು ಮಾಯಾತತ್ತ್ವದ ಪ್ರಾಮುಖ್ಯವನ್ನು ಅಲ್ಲಗೆಳೆದರು. ಎರಡನೆಯದಾಗಿ ಬ್ರಹ್ಮವೊಂದೇ ಸತ್ಯವಾದ ಪಕ್ಷದಲ್ಲಿ ಕೇವಲ ಅತ್ಯಂತಿಕ ಪ್ರಜ್ಞಾತೀತ ಅನುಭವವೊಂದೇ ಅಲ್ಲದೆ ತಿಳಿದುಕೊಳ್ಳುವವರಿಗೆ ಪ್ರತಿಯೊಂದು ಕಾರ್ಯವೂ ಬ್ರಹ್ಮನ ಪ್ರಕಾಶನವೇ ಎಂದು ಸಾರಿದರು. ನಮ್ಮೆಲ್ಲ ಚಿಂತನೆಗಳೂ, ಕ್ರಿಯೆಗಳೂ, ಜೀವನದ ಎಲ್ಲ ಘಟನೆಗಳೂ ಬ್ರಹ್ಮನ ಆವಿರ್ಭಾವವೇ. ಆದರೆ ಈ ಸತ್ಯವನ್ನು ಕೆಲವರು ಮಾತ್ರವೇ ಅರಿಯಬಲ್ಲರು. ಸ್ವಾಮೀಜಿಗೆ ಜೀವನವೇ ಧರ್ಮ ಮತ್ತು ಜೀವಿಸುವುದೆಂದರೆ ಬ್ರಹ್ಮನ ಪ್ರಗತಿಪರ ಸ್ವಯಂ ಪ್ರಕಾಶನ. ಜೀವನದ ಈ ಸಮಗ್ರದೃಷ್ಟಿಯ ಮೇಲೆಯೇ ಅವರ ಕರ್ಮಯೋಗದ ಸಿದ್ಧಾಂತ ಆಧರಿಸಿದೆ. ಸ್ವಾಮೀಜಿ ತತ್ತ್ವಶಾಸ್ತ್ರದಲ್ಲಿನ ಪಾಂಡಿತ್ಯ ಕೌಶಲವನ್ನು ಮೆರೆಸುವವರಾಗಿರಲಿಲ್ಲ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಮುಂದಾಳಾಗಿದ್ದ ಅವರ ಗಮನವೆಲ್ಲ ಬದುಕಿನಲ್ಲಿ ಎದುರಾಗುವ ಜ್ವಲಂತ ಸಮಸ್ಯೆಗಳ ಕಡೆಯೇ. ಆದ್ದರಿಂದ ಅವರ ಚಿಂತನೆಗಳಲ್ಲಿ ಹರಿದು ಹಂಚಿಹೋಗಿರುವ ಕರ್ಮತತ್ತ್ವದ ಬಗೆಗಿನ ಅವರ ನಿಲುವನ್ನು ವ್ಯವಸ್ಥಿತವಾದ ರೀತಿಯಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ.

> ಸಾಂಖ್ಯ-ವೇದಾಂತ ಮನಶ್ಶಾಸ್ತ್ರಜ್ಞರ ಪ್ರಕಾರ "ಗ್ರಹಣ", "ಅರಿವು" ಎಂಬುದು ಉದ್ದೇಶಪೂರ್ವಕವಾದ ಕ್ರಿಯೆ, ಆಂತರಿಕವು ಬಾಹ್ಯ ಜಗತ್ತಿನೊಡನೆ ಹೊಂದುವ ಒಂದು ಸಂಬಂಧ.

ಕರ್ಮ, ವಿದ್ಯೆ ಮತ್ತು ಧರ್ಮ ಇವು ಸಂಸ್ಕೃತಿಯ ಮೂರು ಆಧಾರಸ್ತಂಭಗಳು. ವಿದ್ಯೆ ಹಾಗೂ ಧರ್ಮದ ಬಗೆಗಿನ ತಮ್ಮ ವಿಚಾರಗಳನ್ನು ಸ್ವಾಮೀಜಿಯವರು ನಿಚ್ಚಳಪಡಿಸಿದ್ದಾರೆ. ಅವುಗಳನ್ನು ಆಧರಿಸಿ ಕರ್ಮತತ್ತ್ವದ ಬಗೆಗಿನ ಅವರ ಸ್ಪಷ್ಟವಾದ ವಿಚಾರಗಳನ್ನು ಮಂಡಿಸುವುದು ಸಾಧ್ಯ. ವಿದ್ಯೆಯೆಂದರೆ "ವ್ಯಕ್ತಿಯಲ್ಲಿ ಆಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ" ಹಾಗೂ "ಧರ್ಮವೆಂದರೆ ವ್ಯಕ್ತಿಯಲ್ಲಿ ಆಗಲೇ ಇರುವ ದಿವ್ಯತೆಯ ಅಭಿವ್ಯಕ್ತಿ" ಎಂಬ ಎರಡು ನಿರೂಪಣೆಗಳಲ್ಲೂ ಸಾಮ್ಯತೆ ಇರುವುದರಿಂದ ಕರ್ಮದ ಬಗೆಗಿನ ಅವರ ನಿರೂಪಣೆ ಇವೆರಡಕ್ಕಿಂತಲೂ ಭಿನ್ನವಾದದ್ದೇನೂ ಆಗುತ್ತಿರಲಿಲ್ಲವೆಂದು ನಾವು ತಿಳಿಯಬಹುದಾಗಿದೆ. ವಿದ್ಯೆ ಮತ್ತು ಧರ್ಮದಂತೆ ಕರ್ಮವೂ ಆತ್ಮನನ್ನು ಮುಸುಕಿದ ಆವರಣವನ್ನು ಸರಿಸುವ ಪ್ರಕ್ರಿಯೆ. ತಮ್ಮ ಸುಪ್ರಸಿದ್ಧ "ಕರ್ಮಯೋಗ"ದ ಉಪನ್ಯಾಸಗಳಲ್ಲಿ ಅವರು ಹೇಳುತ್ತಾರೆ : "ಪೌರಸ್ತ್ಯ ಧರ್ಮವು ಜ್ಞಾನವು ಮನುಷ್ಯನಲ್ಲಿ ಸುಪ್ತವಾಗಿ ಅಡಗಿದೆ ಎನ್ನುತ್ತದೆ. ಆದ್ದರಿಂದ ನಾವು ಏನನ್ನು ವ್ಯಕ್ತಿ 'ಅರಿಯುವನು' ಎನ್ನುತ್ತೇವೆಯೋ ಅದು ಶುದ್ಧ ಮನಶ್ಶಾಸ್ತ್ರದ ಭಾಷೆಯಲ್ಲಿ, 'ಅನಾವರಣ' ಅಥವಾ 'ಆವಿಷ್ಕಾರ' ಎನ್ನಬೇಕಾಗುತ್ತದೆ; ಅನಂತ ಜ್ಞಾನದ ಗಣಿಯಾದ ಆತ್ಮನನ್ನು ಮುಸುಕಿರುವ ಆವರಣವನ್ನು ತೆಗೆಯುವುದೇ 'ಕಲಿಕೆ'. ಹೇಗೆ ಚಕಮಕಿ ಕಲ್ಲಿನಲ್ಲಿ ಬೆಂಕಿಯಿರುವುದೋ ಹಾಗೆಯೆ ಮನಸ್ಸಿನಲ್ಲಿ ಜ್ಞಾನ ಹುದುಗಿದೆ; "ಸೂಚನೆ" ಎಂಬ ಉಜ್ಜುವಿಕೆಯೇ ಅದನ್ನು ಪ್ರಕಟಗೊಳಿಸುವುದು. ಆದ್ದರಿಂದ ನಮ್ಮೆಲ್ಲ ಭಾವನೆ ಹಾಗೂ ಕಾರ್ಯಗಳಲ್ಲಿ—ಅಳು-ನಗು, ನೋವು-ನಲಿವು, ಆನಂದ-ದುಃಖ, ಅನುಗ್ರಹ-ಶಾಪ, ಹೊಗಳಿಕೆ-ತೆಗಳಿಕೆ—ಶಾಂತವಾಗಿ ವಿಚಾರಮಾಡಿ ನೋಡಿದರೆ ತಿಳಿಯುವುದು—ಇವುಗಳೆಲ್ಲವೂ ಅನೇಕ ಪೆಟ್ಟುಗಳಿಂದ ನಮ್ಮೊಳಗಿನಿಂದಲೇ ಪ್ರಕಟಗೊಂಡವು ಎಂದು. ಪರಿಣಾಮ ನಾವು ಏನಾಗಿರುವೆವೋ ಅದು. ಈ ಎಲ್ಲ ಪೆಟ್ಟುಗಳನ್ನು ಒಟ್ಟಿಗೆ ತೆಗೆದುಕೊಂಡರೆ ಅದೇ ಕರ್ಮ, ಕಾರ್ಯ, ಕೆಲಸ. ಆತ್ಮಕ್ಕೆ ಬೀಳುವ ಪ್ರತಿಯೊಂದು ಮಾನಸಿಕ, ಕಾಯಿಕ ಪೆಟ್ಟೂ ಕರ್ಮವೇ. ಅದು ಆತ್ಮನಿಂದ ಕಿಡಿಯನ್ನು ಹೊರಡಿಸುತ್ತಿದೆಯೋ ಎಂಬಂತೆ ಅದರ ಶಕ್ತಿಯನ್ನೂ ಜ್ಞಾನವನ್ನೂ ವ್ಯಕ್ತಪಡಿಸುತ್ತದೆ. ಇಲ್ಲಿ 'ಕರ್ಮ' ಪದವನ್ನು ವಿಸ್ತಾರವಾದ ಅರ್ಥದಲ್ಲಿ ಉಪಯೋಗಿಸಲಾಗಿದೆ. ಈ ಅರ್ಥದಲ್ಲಿ ನಾವು ಸದಾ ಕರ್ಮವನ್ನು ಮಾಡುತ್ತಿರುವೆವು" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು. ೩೦-೩೧).

ಧರ್ಮ ಮತ್ತು ವಿದ್ಯೆಯಂತೆ ಕರ್ಮವೂ ಕೂಡ ಅನುಭವಗಳಿಗೆ ಒಂದು ಸಾಧನವೆಂದರು ಸ್ವಾಮಿ ವಿವೇಕಾನಂದರು. ವಿದ್ಯೆಯು ಜ್ಞಾನದ ಅನುಭವವನ್ನು ನೀಡಿದರೆ ಧರ್ಮವು ಅತೀಂದ್ರಿಯ ಅನುಭವವನ್ನು ನೀಡುತ್ತದೆ. ಹಾಗೆಯೇ, ಕರ್ಮವು ಇಷ್ಟಾನುಭವವನ್ನು ನೀಡುವುದು. ಪಾಶ್ಚಾತ್ಯರ ಅಭಿಪ್ರಾಯದಲ್ಲಿ [ಬ್ರೆಂಟನೊ (Brentano) ಅವರ ಹೊರತು] ಅನುಭವವೆಂಬುದು ನಿಷ್ಕ್ರಿಯತ್ಮ ಪ್ರಕೃತಿಯ ಘಟನೆ; ಕ್ಯಾಮರದೊಳಗೆ ಬೆಳಕು ತೂಕ್ಕಂತೆ, ಜ್ಞಾನವು

ಹೊರಗಡೆಯಿಂದ ಮನಸ್ಸಿನೊಳಗೆ ಪ್ರವೇಶಿಸುತ್ತದೆ. ಆದರೆ ಸಾಂಖ್ಯ-ವೇದಾಂತ ಮನಶ್ಶಾಸ್ತ್ರಜ್ಞರ **ಪ್ರಕಾರ "ಗ್ರಹಣ"**, "ಅರಿವು" ಎಂಬುದು ಉದ್ದೇಶಪೂರ್ವಕವಾದ ಕ್ರಿಯೆ, ಆಂತರಿಕವು ಬಾಹ್ಯ ಜಗತ್ತಿನೊಡನೆ ಹೊಂದುವ ಒಂದು ಸಂಬಂಧ.

ಪ್ರತಿಯೊಂದು ಅನುಭವದಲ್ಲೂ ಮೊದಲು ಆತ್ಮನ ಬೆಳಕು ವಸ್ತುವಿನ ಮೇಲೆ ಬೀಳುತ್ತದೆ, ನಂತರ ವಸ್ತುವಿನ ಪ್ರಕಾಶ ಅಥವಾ ಅರಿವುಂಟಾಗುತ್ತದೆ. ಆದ್ದರಿಂದ ಪ್ರತಿಯೊಂದು ಅನುಭವವೂ ಒಂದು ರೀತಿ ಆತ್ಮ-ಪ್ರಕಾಶನವೇ. ಬಹುಮಂದಿಗೆ ಈ ಅದ್ಭುತ ಸತ್ಯದ ಅರಿವೇ ಇಲ್ಲ, ಏಕೆಂದರೆ ಅವರು ಆತ್ಮ ಸ್ವರೂಪದ ಬದಲು ಮನಸ್ಸು ಮತ್ತು ಅದರ ವಿಕಾರಗಳೊಡನೆ ತಾದಾತ್ಮ್ಯವನ್ನು ಹೊಂದಿರುತ್ತಾರೆ. ಯಾರು ತಮ್ಮನ್ನು ಆತ್ಮ ಎಂದು ಪರಿಗಣಿಸುವರೋ, ದೃಗ್-ದೃಶ್ಯ ವಿವೇಕ (ಗ್ರಾಹಕ ಮತ್ತು ಗ್ರಾಹ್ಯದ ನಡುವಿನ ಭೇದ)ವನ್ನು ಅಭ್ಯಸಿಸುವರೋ, ಅಂತಹವರಿಗೆ ಪ್ರತಿಯೊಂದು ಅನುಭವವೂ ಕ್ರಿಯೆಯೂ ಆತ್ಮನ ಅರಿವನ್ನು ಇನ್ನೂ ವೃದ್ಧಿಗೊಳಿಸುವುವು.

ಪ್ರತಿಯೊಂದು ಕರ್ಮವೂ ಅನುಭವವೇ ಮತ್ತು ಪ್ರತಿಯೊಂದು ಅನುಭವವೂ ಆತ್ಮ-ಪ್ರಕಾಶನವೇ ಎಂಬ ಈ ಭಾವನೆಯೇ ಸ್ವಾಮಿ ವಿವೇಕಾನಂದರ ಕರ್ಮಸಿದ್ಧಾಂತದ ತಳಹದಿಯಾಯಿತು. ಆದರೆ ಈ ಸತ್ಯದ ಮನವರಿಕೆಯಾಗಬೇಕಾದರೆ ವ್ಯಕ್ತಿಯು ಶಾಂತಚಿತ್ತನೂ, ಚಿಂತನಶೀಲನೂ, ಜಾಗರೂಕನೂ, ವಿವೇಕಿಯೂ ಆಗಿರಬೇಕು. ಯಾರು ಅಜಾಗರೂಕರೋ, ಆಲೋಚನಾ ರಹಿತರೋ, ಚಂಚಲ ಹಾಗೂ ಪ್ರಕ್ಷುಬ್ಧಮನಸ್ಸುಳ್ಳವರೋ ಅಂತಹವರಿಗೆ ಒಳ್ಳೆಯ ಕರ್ಮಗಳು ಕೇವಲ ಒಳ್ಳೆಯ ಸಂಸ್ಕಾರ ಹಾಗೂ ಶೀಲವನ್ನು ನಿರ್ಮಾಣ ಮಾಡಲು ಸಹಾಯವಾಗುತ್ತವೆ, ಅಷ್ಟೆ.

ಕರ್ಮ ಮತ್ತು ಶೀಲ

ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಗುರುಗಳಾಗಿದ್ದರೂ ಕೂಡ ಸಾಮಾನ್ಯ ಜನತೆಗೂ ಧರ್ಮವನ್ನು ಬೋಧಿಸಿದರು. ಕೆಲವೇ ಅರ್ಹ ವ್ಯಕ್ತಿಗಳ ಆಧ್ಯಾತ್ಮಿಕ ಪ್ರಗತಿಯಲ್ಲಿ ಆಸಕ್ತಿ ತೋರಿಸಿದಂತೆ ಅವರು ಸಾಮಾನ್ಯರಾದ ಬಹುಮಂದಿಯ ಪ್ರಾಪಂಚಿಕ ಉನ್ನತಿಯಲ್ಲೂ ಆಸಕ್ತರಾಗಿದ್ದರು. ಹೆಚ್ಚು ಮಂದಿಗೆ ಆತ್ಮಸಾಕ್ಷಾತ್ಕಾರವು ಒಂದೇ ಬಾರಿಗೆ ಸಾಧ್ಯವಾಗದಿರುವುದರಿಂದ ನೈತಿಕ ಹಾಗೂ ಉಪಯುಕ್ತ ಜೀವನದ ಮೂಲ ತತ್ತ್ವಗಳನ್ನು ತಿಳಿಸಿಕೊಟ್ಟರು. ಅವರ ಸವಿಸ್ತಾರವಾದ ಕೃತಿಶ್ರೇಣಿಗಳಲ್ಲಿ ತ್ಯಾಗ ಮತ್ತು ಆಧ್ಯಾತ್ಮಿಕ ಪಥವನ್ನು ಅನುಸರಿಸಲು ಪ್ರೋತ್ಸಾಹ ಇರುವಂತೆ ಶೀಲನಿರ್ಮಾಣ, ಕಾರ್ಯಕುಶಲತೆ ಹಾಗೂ ದಕ್ಷತೆಯನ್ನು ಪಡೆಯಲು ಪ್ರೋತ್ಸಾಹವಿದೆ. ಈ ಎರಡೂ ವಿಭಿನ್ನ ಬೋಧನೆಗಳನ್ನು ಒಂದೇ ಎಂದು ತಪ್ಪಾಗಿ ತಿಳಿಯಬಾರದು.

ಒಂದು ಸಮಾಜವು ಉನ್ನತ ಸಂಸ್ಕೃತಿಯನ್ನೂ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಬೇಕಾದರೆ ಅದು ಪವಿತ್ರ, ನಿಃಸ್ವಾರ್ಥ ಹಾಗೂ ತೀವ್ರ ಇಚ್ಛಾಶಕ್ತಿಯುಳ್ಳ ವ್ಯಕ್ತಿಗಳಿಗೆ ಜನ್ಮವೀಯಲೇಬೇಕು. ಕರ್ಮದಿಂದ ಒಳ್ಳೆಯ ಶೀಲ ಹಾಗೂ ಇಚ್ಛಾಶಕ್ತಿ ನಿರ್ಮಾಣವಾಗುವುದೆಂದು ಸ್ವಾಮೀಜಿಯವರು ಪದೇ ಪದೇ ಹೇಳುತ್ತಿದ್ದರು (ಅದೇ, ಪು.೩೨). ಗಯಟೆಯ ಸುಪ್ರಸಿದ್ಧ ಹೇಳಿಕೆಯನ್ನು ಇಲ್ಲಿ ನೆನೆಯಬೇಕು : "ಅಸಾಧಾರಣ ಪ್ರತಿಭೆಯು ಏಕಾಂತದಲ್ಲಿ ನಿರ್ಮಾಣವಾಗುವುದು, ಶೀಲವು ಪ್ರಪಂಚದೊಡನೆ ಹೋರಾಡುವುದರಿಂದ." ಪ್ರತಿಯೊಂದು ಕ್ರಿಯೆಯೂ ಮನಸ್ಸಿನ ಮೇಲೆ ಸಂಸ್ಕಾರದ ಮುದ್ರೆಯನ್ನು ಒತ್ತುವುದು ಮತ್ತು ಶೀಲವೆಂದರೆ, ಸ್ವಾಮೀಜಿಯವರ ಪ್ರಕಾರ, ಈ ಸಂಸ್ಕಾರಗಳ ಮೊತ್ತ. ಒಳ್ಳೆಯ ಶೀಲವು ಕೇವಲ ಸುಮ್ಮನೆ ಕುಳಿತುಕೊಳ್ಳುವುದರಿಂದ ಅಥವಾ ಓದುವುದರಿಂದ ನಿರ್ಮಾಣವಾಗುವುದಿಲ್ಲ. ಸತ್ಕರ್ಮ, ಸೇವೆ, ದಾನ ಧರ್ಮಾದಿಗಳಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಮಾತ್ರವೇ ಸಾಧ್ಯ.

> ಅಸಾಧಾರಣ ಪ್ರತಿಭೆಯು ಏಕಾಂತದಲ್ಲಿ ನಿರ್ಮಾಣವಾಗುವುದು, ಶೀಲವು ಪ್ರಪಂಚದೊಡನೆ ಹೋರಾಡುವುದರಿಂದ.
>
> —**ಗಯಟೆ** (Goethe)

ಜನರಲ್ಲಿ ರಜೋಗುಣವನ್ನು ಪ್ರಚೋದಿಸಿ ಅವರನ್ನು ತಮೋಗುಣದಿಂದ ವಿಮುಖಿಗೊಳಿಸಬೇಕೆಂದು ಅವರು ಹೇಳಿದುದರ ಅರ್ಥ ಇದೇ. ಜನರು ಶಕ್ತಿಯುತರಾಗಬೇಕೆಂದು ಅವರು ಬಯಸಿದುದು ತಮ್ಮನ್ನು ಸತ್ಕರ್ಮಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ಶೀಲ ನಿರ್ಮಾಣಕ್ಕಾಗಿ, ಜಗಳ ಕಾದಾಟ ಮಾಡುವುದಕ್ಕಲ್ಲ. ಸೌಶೀಲ್ಯ ಹಾಗೂ ಉತ್ಕೃಷ್ಟತೆಯ ಪ್ರಜ್ಞಾಪೂರ್ವಕ ಹಾಗೂ ಅರ್ಥಪೂರ್ಣ ಅರಸುವಿಕೆ, ಪವಿತ್ರ ಹಾಗೂ ನಿಃಸ್ವಾರ್ಥ ಶೀಲನಿರ್ಮಾಣ—ಇವು ಅವರ ಬರಹ ಹಾಗೂ ಉಪನ್ಯಾಸಗಳಲ್ಲಿ ಪದೇ ಪದೇ ಮೂಡಿದ ಪ್ರಧಾನ ಸಂಗತಿಗಳು.

ಆದರೆ ಅವರು ಜೀವನದ ಆತ್ಯಂತಿಕ ಗುರಿಯ ಬಗ್ಗೆಯೂ ಮಾತನಾಡಿದರು. ಶೀಲ ನಿರ್ಮಾಣವೇ ಆತ್ಯಂತಿಕ ಗುರಿಯಲ್ಲ. ಮನಸ್ಸಿನಲ್ಲಿರುವ ಒಳ್ಳೆಯ ಸಂಸ್ಕಾರಗಳು ಇಚ್ಛಾಶಕ್ತಿಯನ್ನು ಒಳ್ಳೆಯ ದಿಕ್ಕಿನಲ್ಲಿ ಹರಿಸುತ್ತವೆ. ಆದರೆ ಆಧ್ಯಾತ್ಮಿಕ ಜೀವನವೆಂದರೆ ಸಾಮಾನ್ಯ ಮನಸ್ಸಿನ ಸ್ಥಿತಿಯನ್ನು ಮೀರಿ ಉನ್ನತ ಪ್ರಜ್ಞಾಸ್ತರವನ್ನು ಪಡೆಯುವುದು. ಇದು ಸಾಧ್ಯವಾಗಬೇಕಾದರೆ ಒಳ್ಳೆಯ ಸಂಸ್ಕಾರಗಳ ಹಿಡಿತದಿಂದಲೂ ಇಚ್ಛಾಶಕ್ತಿಯು ಬಿಡುಗಡೆ ಹೊಂದಬೇಕು. ಒಳ್ಳೆಯ ಶೀಲವು ಆಧ್ಯಾತ್ಮಿಕ ಜೀವನದ ತಳಹದಿ, ಆದರೆ ಸಾಧಕನು ಇಲ್ಲಿಯೇ ನಿಲ್ಲಬಾರದು. "ಒಳ್ಳೆಯ ಮನಃಸ್ಥಿತಿಯಲ್ಲಿ ನೆಲೆನಿಂತ ನಂತರ ಇನ್ನೂ ಹೆಚ್ಚಿನದನ್ನು ಪಡೆಯುವುದಿದೆ ಮತ್ತು ಅದನ್ನು ತೀವ್ರ ಮೋಕ್ಷಾಕಾಂಕ್ಷೆಯಿಂದ

ಮಾತ್ರ ಪಡೆಯಲು ಸಾಧ್ಯ" ಎಂದು ಸ್ವಾಮೀಜಿಯವರು ಹೇಳುತ್ತಾರೆ **(ಅದೇ, ಪು.೫೫).**

ಈ ಮುಕ್ತಿಪದವನ್ನು ಕರ್ಮಯೋಗದ ಮುಖಾಂತರವೂ ಪಡೆಯಬಹುದು ಎಂಬುದು ಸ್ವಾಮೀಜಿಯವರ ಅಭಿಪ್ರಾಯ. "ಧ್ಯಾನದಿಂದ ಬುದ್ಧನು ಯಾವ ಸ್ಥಿತಿಯನ್ನು ತಲುಪಿದನೋ ಅಥವಾ ಪ್ರಾರ್ಥನೆಯಿಂದ ಕ್ರಿಸ್ತನು ಯಾವ ಸ್ಥಿತಿಯನ್ನು ತಲುಪಿದನೋ ಅದೇ ಸ್ಥಿತಿಯನ್ನು ಕರ್ಮದ ಮೂಲಕವೂ ಪಡೆಯಬಹುದು" ಎಂದು ಅವರು ಖಡಾಖಂಡಿತವಾಗಿ ಹೇಳುತ್ತಾರೆ **(ಅದೇ).** ಗಮನಾರ್ಹವಾದ ವಿಷಯವೆಂದರೆ ಕರ್ಮಯೋಗದ ಗುರಿಯು ಶೀಲನಿರ್ಮಾಣ ಅಥವಾ ಪ್ರಪಂಚದ ಉದ್ಧಾರವಲ್ಲ, ಏಕೆಂದರೆ ಅದು ಪ್ರವೃತ್ತಿಮಾರ್ಗ. ಆದರೆ ಕರ್ಮಯೋಗವು ನಿವೃತ್ತಿ ಮಾರ್ಗಕ್ಕೆ ಅನ್ವಯಿಸುತ್ತದೆ. ಇದೊಂದು ಆಧ್ಯಾತ್ಮಿಕ ಸಾಧನೆ ಹಾಗೂ ಮುಕ್ತಿಯೇ ಅದರ ಗುರಿ. ತೀವ್ರ ಮೋಕ್ಷಾಕಾಂಕ್ಷೆಯೇ ಕರ್ಮಯೋಗಾಭ್ಯಾಸಕ್ಕೆ ಬೇಕಾದ ಅರ್ಹತೆ. ಯಾರಲ್ಲಿ ಮೋಕ್ಷಾಕಾಂಕ್ಷೆಯು ತೀವ್ರವಾಗಿ ಇಲ್ಲವೋ ಅಂತಹವರು ಸತ್ಕರ್ಮ, ದಾನಧರ್ಮಾದಿ ಸೇವಾಕಾರ್ಯಗಳು, ಸತ್ಸಂಗ, ಸದ್ಗ್ರಂಥಗಳ ಅಧ್ಯಯನ, ನಿತ್ಯಾನಿತ್ಯವಸ್ತು ವಿವೇಕ, ಪ್ರಾರ್ಥನೆ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ ಎರಡು ವಿಧದ ಕರ್ಮಯೋಗಗಳು.

ಸ್ವಾಮೀಜಿಯವರು ತಮ್ಮ ಉಪನ್ಯಾಸಗಳಲ್ಲಿ ಎರಡು ವಿಧದ ಕರ್ಮಯೋಗವನ್ನು ಕುರಿತು ತಿಳಿಸಿದ್ದಾರೆ. "ಎಲ್ಲ ಆಸಕ್ತಿಯಿಂದ ಬಿಡುಗಡೆ ಹೊಂದಲು ಇಲ್ಲಿ ಎರಡು ಮಾರ್ಗಗಳಿವೆ. ಒಂದು ಯಾರಿಗೆ ದೇವರಲ್ಲಿ ನಂಬಿಕೆ ಇಲ್ಲವೋ ಅಥವಾ ಹೊರಗಿನ ಯಾವ ಸಹಾಯದ ಮೇಲೂ ನಿರ್ಭರರಲ್ಲವೋ ಅಂತಹವರಿಗೆ. ಅವರಿಗೆ ತಮ್ಮದೇ ಆದ ಸಾಧನಗಳಿವೆ ; ಇಚ್ಛಾಶಕ್ತಿ, ಮನಶ್ಶಕ್ತಿ ಹಾಗೂ ವಿವೇಚನೆಗಳಿಂದ 'ನಾನು ಅನಾಸಕ್ತನಾಗಿರಬೇಕು' ಎಂಬ ನಿರ್ಣಯದೊಡನೆ ಕೆಲಸ ಮಾಡುತ್ತ ಹೋಗಬೇಕು. ಇನ್ನೊಂದು ಯಾರಿಗೆ ದೇವರ ಅಸ್ತಿತ್ವದಲ್ಲಿ ಶ್ರದ್ಧೆಯಿದೆಯೋ ಅಂತಹವರ ಮಾರ್ಗ. ಇದು ಕಡಿಮೆ ಕಠಿಣ. ಅವರು ಕರ್ಮಫಲವನ್ನು ದೇವರಿಗೆ ಅರ್ಪಿಸುತ್ತಾರೆ.... ನಾವು ಭಗವಂತನ ಸೇವಕರೆಂದರಿತು ಆತನ ಆಜ್ಞೆಯನ್ನು ಪಾಲಿಸೋಣ. ಪ್ರತಿಯೊಂದು ನಿಮಿಷವೂ, ಪ್ರತಿಯೊಂದು ಕಾರ್ಯಕ್ಕೂ ಆತನೇ ಪ್ರೇರಣೆ " **(ಅದೇ, ೧೦೭).**

ಮೊದಲನೇ ರೀತಿಯ ಕರ್ಮಯೋಗವನ್ನೇ ಸ್ವಾಮಿ ವಿವೇಕಾನಂದರು "ಕರ್ಮಕ್ಕೋಸ್ಕರವೇ ಕರ್ಮ" ಎಂದು ಕರೆದರು. ಈ ರೀತಿಯ ಕರ್ಮಯೋಗವನ್ನೇ ಸಾಧಾರಣವಾಗಿ ಮುಕ್ತಿಯನ್ನು ಗಳಿಸಲು ಹೊಸದೊಂದು ಮಾರ್ಗವೆಂದು ಕರೆಯುತ್ತಾರೆ. ಇದರ ನೈಜ ಅರ್ಥವೇನೆಂದರೆ ಈ ರೀತಿಯ ಕರ್ಮಯೋಗದಲ್ಲಿ ಸಗುಣ ದೇವರು, ಭಗವದನುಗ್ರಹ ಮುಂತಾದವುಗಳಲ್ಲಿ ನಂಬಿಕೆಯಿರಬೇಕಾಗಿಲ್ಲ ಎಂದು. ಆದರೆ ಇದರರ್ಥ ಯಾವುದೇ ಕರ್ಮ, ಹೇಗೇ ಮಾಡಿದರೂ ಮುಕ್ತಿ ದೊರೆಯುವುದು ಎಂದಲ್ಲ. "ಕರ್ಮ" ಪದದ ನೈಜಾರ್ಥದ ಬಗ್ಗೆ ಇರುವ ತಪ್ಪು ತಿಳುವಳಿಕೆಯೇ ಈ ಭಾವನೆಗೆ ಕಾರಣ. ಈ ವಿಷಯವನ್ನು ಕೂಲಂಕಷವಾಗಿ ಮುಂದೆ ನೋಡೋಣ. ಈಗ ಇಲ್ಲಿ ನಾವು ಗಮನಿಸಬೇಕಾದ ಅಂಶ ಕರ್ಮವೆಂದರೆ ಕೇವಲ ಮಾಂಸಖಂಡಗಳ ಚಲನೆಯಲ್ಲ ಎಂಬುದು. ದೇಹ ಮತ್ತು ಮನಸ್ಸುಗಳಿಗೆ ಅನ್ಯೋನ್ಯ ಸಂಬಂಧವಿದೆ ಮತ್ತು ಪ್ರತಿಯೊಂದು ಇಚ್ಛಾಪೂರ್ವಕ ಕಾರ್ಯದಲ್ಲೂ ಮನಸ್ಸೂ ಒಳಗೊಂಡಿರುತ್ತದೆ. ಮನಸ್ಸು ಸದಾ ಕೆಲಸವನ್ನು ಮಾಡಲು ಪ್ರೇರೇಪಿಸುತ್ತಿರುತ್ತದೆ. ಅದೇ ರೀತಿ ಕರ್ಮ ಕೂಡ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತಿರುತ್ತದೆ.

**ಸ್ವಾಮಿ ವಿವೇಕಾನಂದರು ಬೋಧಿಸಿದ ಕರ್ಮಯೋಗವು ಮನಸ್ಸಿನ ಬೆಳವಣಿಗೆಗೆ ಹಾಗೂ ಪರಿವರ್ತನೆಗೆ ಒಂದು ಸಾಧನ.**

"ಕರ್ಮಕ್ಕಾಗಿ ಕರ್ಮ" ಎಂದು ಮುಕ್ತಿಗೆ ನೇರವೂ ಸ್ವತಂತ್ರವೂ ಆದ ಮಾರ್ಗವಾಗಿ ಸ್ವಾಮಿ ವಿವೇಕಾನಂದರು ಬೋಧಿಸಿದ ಕರ್ಮಯೋಗವು ಮೀಮಾಂಸಕರ ಸಿದ್ಧಾಂತವಾದ ಕರ್ಮಫಲವನ್ನು ಭೌತಿಕವಾಗಿ ನಿಶ್ಶೇಷಗೊಳಿಸುವುದು ಎಂಬುದಕ್ಕಿಂತ ಭಿನ್ನವಾದುದು. ಮೊದಲೇ ಹೇಳಿದಂತೆ, ಕುಮಾರಿಲ, ಪ್ರಭಾಕರ ಮುಂತಾದ ಮೀಮಾಂಸಕರು, ಜ್ಞಾನವು ಕೇವಲ ಕರ್ಮದ ಸ್ಥೂಲಾವಸ್ಥೆಯನ್ನು ಮಾತ್ರ ನಾಶಗೊಳಿಸುವುದು. ಸೂಕ್ಷ್ಮಾವಸ್ಥೆ ಅಥವಾ ಕರ್ಮಫಲವನ್ನು ಜ್ಞಾನವು ನಾಶಗೊಳಿಸದು ಮತ್ತು ಅದು ಕರ್ತೃವಿಗೇ ಹಿಂದಿರುಗಿ ಬರುತ್ತದೆ. ಒಬ್ಬನು ತನ್ನ ಹಿಂದಿನ ಕರ್ಮಫಲಗಳೆಲ್ಲಾ ನಿಶ್ಶೇಷವಾಗುವ ತನಕ ಕಾಯಬೇಕು ಮತ್ತು ಅದೇ ವೇಳೆಯಲ್ಲಿ ಇನ್ನೂ ಹೊಸ ಕರ್ಮಗಳನ್ನು ಸಂಚಯ ಮಾಡದಂತೆ ನಿಃಸ್ವಾರ್ಥ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಈ ರೀತಿಯ ಯಾಂತ್ರಿಕ ಕರ್ಮಫಲ ನಿಶ್ಶೇಷವನ್ನು ಒಪ್ಪಲಿಲ್ಲ. ಅವರೂ ಶಂಕರರಂತೆ ಕರ್ಮಫಲಗಳೆಲ್ಲವನ್ನೂ ಜ್ಞಾನದಿಂದ ನಾಶಗೊಳಿಸಬಹುದೆಂದು ನಂಬಿದ್ದರು. ಶಂಕರರಂತೆ ಸ್ವಾಮೀಜಿಯವರೂ ವೈದಿಕ ಕ್ರಿಯಾವಿಧಿಗಳು ಎಲ್ಲರಿಗೂ ಅನ್ವಯಿಸುವುದಿಲ್ಲ ಎಂಬುದನ್ನು ಸಹ ಒಪ್ಪಿದರು. ಮೀಮಾಂಸಕರ ಸಿದ್ಧಾಂತವು "ಕರ್ತವ್ಯಕ್ಕೋಸ್ಕರ ಕರ್ತವ್ಯ" ಎಂದಾಗಿತ್ತು. ಕರ್ತವ್ಯವೆಂದರೆ ನಿರ್ಬಂಧನ, ಕಟ್ಟುಪಾಡು, ಮುಕ್ತವಾದ ಆತ್ಮನಿಗೆ ಒಂದು ಸಂಕೋಲೆಯಂತೆ. ಸ್ವಾಮೀಜಿಯವರ ಅಭಿಪ್ರಾಯದಲ್ಲಿ ಕರ್ಮಯೋಗವು ಮುಕ್ತ ಕರ್ತೃವಿನ ಕರ್ಮ. ಅವರು ತಮ್ಮ ಅನುಯಾಯಿಗಳಿಗೆ ಕರ್ತವ್ಯದ ಹೊರೆಯಿಂದ ಗುಲಾಮನಂತೆ ಕೆಲಸ ಮಾಡದೆ ಯಜಮಾನನಂತೆ ಕೆಲಸ ಮಾಡಲು ಪ್ರೇರೇಪಿಸುತ್ತಿದ್ದರು. ಕರ್ತವ್ಯದ ಬಗ್ಗೆ ಅವರು "ಅದು ನಮ್ಮನ್ನು ತನ್ನ ಮುಷ್ಟಿಯಲ್ಲಿ ನಮ್ಮನ್ನು ಸಿಲುಕಿಸಿ

ನಮ್ಮ ಇಡೀ ಜೀವನವನ್ನೆಲ್ಲಾ ದುಃಖದ ಕಡಲಲ್ಲಿ ಮುಳುಗಿಸಿ ಬಿಡುತ್ತವೆ. ಅದೊಂದು ಶಾಪ.... ಕ್ರೌರ್ಯವನ್ನು ತಡೆಗಟ್ಟುವಷ್ಟರ ಮಟ್ಟಿಗೆ ಕರ್ತವ್ಯ ಒಳ್ಳೆಯದು. ಅತಿ ಕೆಳಗಿನ ಮಟ್ಟದ ಜನರಿಗೆ, ಬೇರಾವ ಗುರಿಯೂ ಇಲ್ಲದವರಿಗೆ ಅದು ಒಳ್ಳೆಯದು. ಆದರೆ ಯಾರು ಕರ್ಮಯೋಗಿಗಳೋ ಅವರು ಈ ಕರ್ತವ್ಯ ಭಾವನೆಯನ್ನು ಕಿತ್ತೆಸೆಯಬೇಕು.... ನಿರ್ಬಂಧನೆಗಳಿಗೆ ಒಳಗಾಗಿ ಮಾಡುವ ಎಲ್ಲ ಕಾರ್ಯಗಳೂ ಬಂಧನವನ್ನು ಉಂಟು ಮಾಡುತ್ತವೆ" (ಅದೇ, ೧೧೯) ಎಂದು ಹೇಳುತ್ತಾರೆ.

ಸ್ವಾಮಿ ವಿವೇಕಾನಂದರು ಬೋಧಿಸಿದ ಕರ್ಮಯೋಗವು ಮನಸ್ಸಿನ ಬೆಳವಣಿಗೆಗೆ ಹಾಗೂ ಪರಿವರ್ತನೆಗೆ ಒಂದು ಸಾಧನ. ಭೌತದ್ರವ್ಯದ ಚಲನೆಯೇ ಕರ್ಮ, ದೇಹದ ಯಾಂತ್ರಿಕ ಚಲನವಲನಗಳೇ ಮುಕ್ತಿಗೆ ಕೊಂಡೊಯ್ಯುವುದು ಎಂದು ನಾವು ತಪ್ಪಾಗಿ ತಿಳಿಯಬಾರದು. ಹಾಗೂ "ಭೌತದ್ರವ್ಯವು ಶಕ್ತಿಯುತವಾಗಿದ್ದರೆ, ಚೈತನ್ಯವು ಸರ್ವಶಕ್ತ" ಎಂದು ಪದೇ ಪದೇ ಬಳಲದೆ ಹೇಳುತ್ತಿದ್ದ ಆಚಾರ್ಯರಿಗೆ (ಸ್ವಾಮೀಜಿಯವರಿಗೆ) ಈ ಸಿದ್ಧಾಂತವನ್ನು ಅನ್ವಯಿಸಬಾರದು. ಜಾಗೃತ ವ್ಯಕ್ತಿಯ ಪಾಲಿಗೆ ಪ್ರತಿಯೊಂದು ಕಾರ್ಯವೂ ಹೇಗೆ ಆ ಚೈತನ್ಯದ ಪ್ರಕಾಶನವೇ ಎಂಬ ಸತ್ಯವನ್ನು ಹಿಂದೆಯೇ ನೋಡಿರುವೆವು. "ಕರ್ಮಕ್ಕೋಸ್ಕರ ಕರ್ಮ"ವೆಂಬ ತತ್ತ್ವವನ್ನು ಜ್ಞಾನಯೋಗದ ಪರಿಧಿಯೊಳಗೆ ಸೇರಿಸಬಹುದು. ಏಕೆಂದರೆ ಅದು ಆತ್ಮಜ್ಞಾನದ ಮೇಲೆ ನಿರ್ಭರವಾಗಿದೆ ಹಾಗೂ ಆ ಜ್ಞಾನ ಮುಕ್ತಿಯನ್ನು ನೀಡುವುದು. ಆತ್ಮನನ್ನು ಮುಸುಕಿರುವ ಆವರಣಗಳನ್ನು ಸರಿಸುವ ಸಾಧನವದು. ಈ ವಿಷಯವನ್ನು ಸ್ವಾಮೀಜಿಯವರು ತಮ್ಮ ಶಿಷ್ಯನಾದ ಶರತ್‌ಚಂದ್ರ ಚಕ್ರವರ್ತಿಗಳೊಡನೆ ನಡೆದ ಸಂವಾದದಲ್ಲಿ ವಿವರಿಸಿದ್ದಾರೆ: "ಆತ್ಮಪ್ರಕಾಶದ ಹಾದಿಯಲ್ಲಿರುವ ವಿಘ್ನಗಳನ್ನು ಶಾಸ್ತ್ರಗಳಲ್ಲಿ ಹೇಳಿರುವ ಸಾಧನೆಗಳನ್ನು ಅಭ್ಯಸಿಸುವುದರ ಮೂಲಕ ನಿವಾರಿಸಬಹುದು; ಆದರೆ ಕರ್ಮಕ್ಕೆ ನೇರವಾಗಿ ಆತ್ಮನನ್ನು ಪ್ರಕಾಶಗೊಳಿಸುವ ಶಕ್ತಿಯಿಲ್ಲ; ಅದು ಕೇವಲ ಕೆಲವು ಆವರಣಗಳನ್ನು ಸರಿಸುವುದು. ಆಗ ಆತ್ಮನು ತಾನೇ ತಾನಾಗಿ ಪ್ರಕಾಶಗೊಳ್ಳುವನು" (ಕೃತಿಶ್ರೇಣಿ, ೮: ೧೮೨).

ಈ ರೀತಿಯ ಕರ್ಮಯೋಗದ ಗುರಿಯೇ ಮನಸ್ಸನ್ನು ಪರಿಶುದ್ಧಗೊಳಿಸುವುದು. ಶಂಕರರೂ ಈ ವಿಷಯವನ್ನು ಸಮ್ಮತಿಸುತ್ತಾರೆ. ಆದರೆ ಶಂಕರರ ಅಭಿಪ್ರಾಯದಲ್ಲಿ ಸಂಪೂರ್ಣ ಕರ್ಮತ್ಯಾಗ ಮತ್ತು ಶಾಸ್ತ್ರಾಧ್ಯಯನಕ್ಕೆ (ವಿಶೇಷವಾಗಿ ಸಾಕ್ಷಾತ್ಕಾರ ಪಡೆದ ಗುರುವಿನ ಬಳಿ ಮಂತ್ರವನ್ನು ಪಡೆಯುವುದಕ್ಕೆ) ಮುನ್ನ ಮನಸ್ಸಿನ ಪರಿಶುದ್ಧತೆ ಆವಶ್ಯಕ. ಆದರೆ ಸ್ವಾಮೀಜಿ ಇಂತಹ ನಿರ್ಬಂಧನೆಗಳನ್ನೇನೂ ಹೇರುವುದಿಲ್ಲ. ಸ್ವಾಮೀಜಿಯವರ ಮತದಲ್ಲಿ ಮನಸ್ಸು ಪರಿಶುದ್ಧವಾದಾಗ ಆತ್ಮವು ತಾನೇ ತಾನಾಗಿ ಪ್ರಕಾಶಗೊಳ್ಳುವುದು.

ಆದರೆ ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಸ್ವಾಮೀಜಿಯವರ ದೃಷ್ಟಿಯಲ್ಲಿ ಕರ್ಮಯೋಗವೆಂದರೆ ಮೀಮಾಂಸಕರು ಹೇಳುವಂತೆ ಸಂಚಿತಕರ್ಮಗಳ ನಾಶಕ್ಕಾಗಿ ಅಲ್ಲ, ಶುದ್ಧೀಕರಣದ ಮೂಲಕ, ಕರ್ಮದ ಮೂಲಕ ಆತ್ಮಜ್ಞಾನವನ್ನು ಪಡೆಯುವುದಕ್ಕೆ. ಇದೊಂದು ರೀತಿಯ ಪ್ರಾಯೋಗಿಕ ಜ್ಞಾನ ಯೋಗ. ಆದ್ದರಿಂದ ಸ್ವಾಮಿ ವಿವೇಕಾನಂದರು ಕರ್ಮದ ಮೂಲಕ ಮುಕ್ತಿಯನ್ನು ಪಡೆಯುವ ಹೊಸದೊಂದು ಮಾರ್ಗವನ್ನು ಹೇಳಿಕೊಟ್ಟರುವರೆಂದರೆ, ಅದೊಂದು ಹೊಸರೀತಿಯ ಕರ್ಮ ತ್ಯಾಗವಿಲ್ಲದ ಜ್ಞಾನಯೋಗ. ಇದು ಜ್ಞಾನಯೋಗದ ಪರಿಧಿಯೊಳಗೇ ಬರುವುದರಿಂದ ಶಾಸ್ತ್ರಗಳಿಗಾಗಲೀ, ಪೂರ್ವಾಚಾರ್ಯರ ನಿಲುವಿಗಾಗಲೀ ವಿರುದ್ಧವಲ್ಲ.

**ಸ್ವಾಮಿ ವಿವೇಕಾನಂದರು ಬೋಧಿಸಿದ ಕರ್ಮಯೋಗವು ಒಂದು ಹೊಸರೀತಿಯ ಕರ್ಮತ್ಯಾಗವಿಲ್ಲದ ಜ್ಞಾನಯೋಗ.**

## ಗುರಿ ಮತ್ತು ಸಾಧನ

ಸ್ವಾಮಿ ವಿವೇಕಾನಂದರು "ಕರ್ಮ ಮತ್ತು ಅದರ ರಹಸ್ಯ" ಎಂಬ ತಮ್ಮ ಉಜ್ವಲ ಉಪನ್ಯಾಸದಲ್ಲಿ ಹೀಗೆಂದು ಹೇಳುತ್ತಾರೆ: "ನಾನು ಜೀವನದಲ್ಲಿ ಕಲಿತ ಅತಿ ದೊಡ್ಡ ಪಾಠವೆಂದರೆ ಗುರಿಯಷ್ಟೇ ಸಾಧನದೆಡೆಗೂ ಗಮನವೀಯಬೇಕು ಎಂಬುದು" (ಕೃತಿಶ್ರೇಣಿ, ಸಂ.೬, ಪು.೨೪೨).ಇದರ ಅರ್ಥವೇನು? ಅಂದರೆ ಕರ್ಮವು ಕೇವಲ ಸಾಧನವೇ ಹೊರತು ಗುರಿಯಲ್ಲ. "ಕರ್ಮಕ್ಕೋಸ್ಕರ ಕರ್ಮ"ವೆಂದರೆ ಕರ್ಮವನ್ನು ಸ್ವಾರ್ಥೋದ್ದೇಶಗಳಿಲ್ಲದೆ ಮಾಡುವುದು. ಈ ದೃಷ್ಟಿಯಿಂದ ಕರ್ಮವು ಜ್ಞಾನ ಮತ್ತು ಭಕ್ತಿಗಿಂತ ಭಿನ್ನವಾದುದು. ಜ್ಞಾನಮಾರ್ಗದವರು ಜ್ಞಾನವು ಕೇವಲ ಸಾಧನವಲ್ಲ, ಗುರಿಯೂ ಹೌದು ಎನ್ನುತ್ತಾರೆ. ಅದೇ ರೀತಿ ಭಕ್ತಿಮಾರ್ಗದವರು ಭಕ್ತಿಯು ಸಾಧನ ಹಾಗೂ ಗುರಿ ಎರಡೂ ಎನ್ನುತ್ತಾರೆ. ಆದರೆ ಕರ್ಮದ ಗುರಿಯು ಕರ್ಮವಲ್ಲ, ನೈಷ್ಕರ್ಮ್ಯ (ಕರ್ಮರಾಹಿತ್ಯ), ಮುಕ್ತಿ ಎಂದರೆ ಅದೇ. ಮುಕ್ತಾವಸ್ಥೆಯಲ್ಲಿ ಜೀವಿಯು ಎಲ್ಲ ಬಂಧನ ಗಳಿಂದ ಮುಕ್ತವಾಗಿ ತನ್ನ ನೈಜಸ್ವರೂಪವನ್ನು ಅರಿಯುವುದು. ಕರ್ಮದ ಮುಖಾಂತರವೇ ಆ ಸ್ಥಿತಿಯನ್ನು ತಲುಪಬೇಕಾದರೂ ಅಲ್ಲಿ ಕರ್ಮಕ್ಕೆ ಏನೂ ಸ್ಥಾನವಿಲ್ಲ. ಸಾವಿನಿಂದಲೂ ಕೂಡ ನಮ್ಮ ಕ್ರಿಯೆಗಳು ಅಂತ್ಯವಾಗುವುದಿಲ್ಲ, ಆದರೆ ಮುಕ್ತಿಯು ಅವುಗಳಿಗೆ ಅಂತ್ಯವನ್ನು ನೀಡುವುದು. ಎಲ್ಲ ಕರ್ಮಗಳಿಗೂ ಒಂದು ಅಂತ್ಯವಿರಲೇಬೇಕು. ಸಿಸಿಫಸ್‌ನ ನಿರಂತರ ಕರ್ಮವೂ ಕೂಡ ಒಂದು ದಿನ ಕೊನೆಗಾಣಲೇಬೇಕು.

(ಮುಂದುವರಿಯುತ್ತದೆ)